ಕತೆ



ಮೂಲ: **ಆಂಟನ್ ಚೆಕಾವ್**

ಕನ್ನಡಕ್ಕೆ: **ನಾಗರೇಖಾ ಗಾಂವಕರ**

ಕಲೆ: ಡಿ.ಕೆ. ರಮೇಶ್



# ಅಸ್ವಸ್ಥತೆ

ಗ್ರಾಮೀಣ ವಿಭಾಗದ ಪೊಲೀಸ್ ಕಮೀಷನರ್ ಆಗಿದ್ದ ಸಿಮೊನ್ ಪ್ರಾಟ್ಕಿನ್, ತನ್ನ ಕೋಣೆಯಲ್ಲಿ ಅತ್ತಿಂದಿತ್ತ ಇತ್ತಿಂದತ್ತ ಸುತ್ತತೊಡಗಿದ. ಮನಸ್ಸಿಗೆ ಹೌದೆಂದು ಒಪ್ಪಿಕೊಳ್ಳಲು ಆಗದ ಉದ್ವೇಗವನ್ನು ತಣಿಸುವ ಪ್ರಯತ್ನ ಮಾಡುತ್ತಿದ್ದ. ವ್ಯವಹಾರಕ್ಕೆ ಸಂಬಂಧ ಪಟ್ಟಂತೆ ನಿನ್ನೆ ಸಂಜೆ ಹೊತ್ತಿಗೆ ಪೊಲೀಸ್ ಚೀಫ್ ಆಫೀಸರ ಅವರನ್ನು ಕಾಣಲು ಹೋದವನಿಗೆ ಅನೀರಿಕ್ಷಿತವಾಗಿ ಇಸ್ಪೀಟ್ ಆಟಕ್ಕೆ ಕುಳಿತುಕೊಳ್ಳುವಂತಾಗಿತ್ತು. ಆದರೆ, ಆಟದಲ್ಲಿ ಆತ ಎಂಟು ರೂಬಲ್ ಕಳಕೊಂಡಿದ್ದ. ಅದೇನೂ ಅಂತಹ ಅಂತಹ ದೊಡ್ಡ ಮೊತ್ತವೇನಲ್ಲ. ಆದರೆ ಅತಿಯಾಸೆ, ಲೋಭ ಈ ಭೂತಗಳಿವೆಯಲ್ಲ... ಅವು ಆತನ ಕಿವಿಯಲ್ಲಿ ಒಂದೇ ಸಮನೆ ಕಳೆದುಕೊಂಡ ಹಣದ ಬಗ್ಗೆ ಆಪಾದಿಸುತ್ತಿದ್ದವು. ಪದೇಪದೇ ಕಿವಿಯಲ್ಲಿ ಅದೊಂದೇ ಗುಂಯ್ ಗುಡುತ್ತಿತ್ತು.

"ಎಂಟು ರೂಬಲ್ಸ್! ಏನೂ ಅಲ್ಲ!" ತನ್ನೊಳಗಿನ ಆಸೆ ಭೂತದ ದನಿಯನ್ನು ನಿಗ್ರಹಿಸಿಕೊಳ್ಳುತ್ತಾ ಪ್ರಾಟ್ಕಿನ್ ಕಿರುಚಿದ.

"ಜನ ಚೂರು ಚಿಂತೆ ಮಾಡದೇ ಇದಕ್ಕಿಂತ ಹೆಚ್ಚು ಹಣ ಕಳ್ಕೋತಾರೆ. ಮೇಲಾಗಿ ಹಣ ಇರುವುದೇ ಖರ್ಚು ಮಾಡೋಕಲ್ವಾ. ಫ್ಯಾಕ್ಟರಿಗೆ ಒಂದು ಟ್ರಿಪ್ ಹೋಗೋಕೆ, ಇಲ್ಲ ಫಿಲೋಫ್‌ನ ಮದ್ಯದಂಗಡಿಗೆ ಒಂದು ಭೇಟಿ ಕೊಟ್ಟರೆ ಈ ಎಂಟು ರೂಬಲ್‌ಗಳು ಸುಮ್ಮನೇ ಹಿಂಗೇ ಬಕೆಟ್‌ನ ಒಂದು ಹನಿ ಹಂಗೇ ಖರ್ಚಾಗ್ತವೆ."

"ಇದು ಚಳಿಗಾಲ: ಕುದುರೆ ಮತ್ತು ರೈತ"

ಪಕ್ಕದ ಕೋಣೆಯಲ್ಲಿ ಪ್ರಾಟ್ಕಿನ್‌ನ ಮಗ ವ್ಯಾನಿಯಾ ಒಂದೇ ಸಮನೇ ಪಾಠದ ಉರುಹೊಡೆಯುತ್ತಿದ್ದಾನೆ.

"ಕಳದಾರಿಯ ಗುಂಟ ಚಲಿಸಿದೆ ಜಯವು, ಚಲಿಸಿದೆ ಜಯವು."

"ಜಯ" ಪ್ರಾಟ್ಕಿನ್ ಈಗ ಆಲೋಚನೆ ಎಂಬ ರೈಲಿನ ಹಿಂದೆಯೇ ಹೊರಟ.

"ಡಜನ್ ರೂಬಲ್‌ಗಳಿಗೆ ಅಂಟಿಕೊಂಡಿದ್ದರೆ ಅವನು ಇಷ್ಟು ಜಯಶಾಲಿಯಾಗುತ್ತಿರಲಿಲ್ಲ! ಹಾಗಿದ್ದರೆ, ಅವನ ಗೆಲುವಾದರೂ ಏನು? ಸಾಲವನ್ನಾದ್ರೂ ಸರಿಯಾಗಿ ಪಾವತಿಸಲಿ! ಎಂಟು ರೂಬಲ್ಸ್–ಅದೇನು ಮಹಾ. ಬರೀ ಚಿಲ್ಲರೆ ಅಷ್ಟೆ! ಅದೇನೂ ಎಂಟು ನೂರು ರೂಬಲ್‌ಗಳಲ್ಲವಲ್ಲ. ಯಾರೇ ಆದರೂ ಈ ಎಂಟು ರೂಬಲ್‌ಗಳನ್ನು ವಾಪಸ್ಸು ಗಳಿಸಬಹುದು."

"ಮತ್ತಾ ಕುದುರೆ ಚಂಗನೇ ಹಾರಿತು
ಇಬ್ಬನಿ ಸುರಿದೀತು ಎಂದೆನ್ನಿಸಿ
ಇಬ್ಬನಿ ಸುರಿದೀತು ಎಂದೆನ್ನಿಸಿ"

"ಒಳ್ಳೆಯದು, ಬಹುಶಃ ಅದು ನೆಗೆಯುತ್ತಾ